# ಕೆ.ಸಿ.ಡಿ. ಸಮಾಚಾರ

ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ

ಶಿಕ್ಷಣ–ಸಂಸ್ಕೃತಿ–ಸಮಾಜ ನಮ್ಮ ಧ್ಯೇಯ, ನಿಷ್ಠೆ

KCD JOURNALISM CLUB DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. 2/1/2017 ರಿಂದ 9/1/2017 ಸಂಚಿಕೆ: 6 ಸಂಪುಟ: 2 ಪುಟ: 1


**ಕರ್ನಾಟಕ ಕಾಲೇಜಿನ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯ–ರಿಗೆ ಹೊಸ ವರ್ಷ ಶುಭಾಷಯಗಳು. ತಮ್ಮ ಭವಿಷ್ಯ ಉಜ್ವಲವಾಗಲಿ ಎಂದು ಪ್ರಾಚಾರ್ಯ ಡಾ.ಎಸ್.ಎಸ್.ಕಟ್ಟಿಮನಿ ಹಾಗು ಉಪ ಪ್ರಾಚಾರ್ಯ ಡಾ.ರಾಜೇಶ್ವರಿ ಮಹೇಶ್ವರಯ್ಯ ಶುಭ ಹಾರೈಸಿದ್ದಾರೆ.**

## ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ "ಸದರ್ನ ಮಹಾರಾಷ್ಟ್ರ ರೈಲ್ವೆ ನಿರ್ಮಾಣದಲ್ಲಿ ಬ್ರಿಟೀಷರ್ ಕಾರ್ಯ" ಪುಸ್ತಕ ಬಿಡುಗಡೆ




**ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ "ಸದರ್ನ ಮಹಾರಾಷ್ಟ್ರ ರೈಲ್ವೆ ನಿರ್ಮಾಣದಲ್ಲಿ ಬ್ರೀಟಿಷರ್ ಕಾರ್ಯ" ಎಂಬ ಪುಸ್ತಕವನ್ನು ಕರ್ನಾಟಕ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್.ಎಸ್. ಕಟ್ಟಿಮನಿ ಬಿಡುಗಡೆಗೊಳಿಸಿದರು. ಪುಸ್ತಕದ ಲೇಖಕರಾದ ಶ್ರೀ. ಎಸ್. ವೆಂಕಟರಾಮನ್ ಚಿತ್ರದಲ್ಲಿದ್ದಾರೆ.**

ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ "ಸದರ್ನ ಮಹಾರಾಷ್ಟ್ರ ರೈಲ್ವೆ ನಿರ್ಮಾಣದಲ್ಲಿ ಬ್ರೀಟಿಷರ್ ಕಾರ್ಯ" ಎಂಬ ಪುಸ್ತಕವನ್ನು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್. ಎಸ್. ಕಟ್ಟಿಮನಿ ಬಿಡುಗಡೆಗೊಳಿಸಿ ಮಾತನಾಡಿ ಸ್ವಪ್ರೇರಣೆಯಿಂದ ಸ್ವಂತ ಹಣವನ್ನು ಖರ್ಚುಮಾಡಿ ಇಂತಹ 93ರ ವಯಸ್ಸಿನಲ್ಲಿ ಪುಸ್ತಕವನ್ನು ರಚಿಸುವದು ಒಂದು ಸವಾಲಾಗಿದ್ದು, ಇವರ ನಾಲ್ಕು ಕೃತಿಗಳು ರೇಲ್ವೆಯ 16 ಪ್ರಾದೇಶಿಕ ವಲಯಗಳ ಕುರಿತು ಮಾಹಿತಿ ನೀಡುತ್ತದೆ. ಇದು ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಉಪಯುಕ್ತವಾದ ಮಾಹಿತಿಯನ್ನು ಒಳಗೂಂಡಿದೆ ಎಂದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಕಟ್ಟಡವು ದಕ್ಷಿಣ ಮಹಾರಾಷ್ಟ್ರದ ಮುಖ್ಯ ಕಚೇರಿ ಇದ್ದು, ಮುಂದೆ ಇದನ್ನು ಸರಕಾರಕ್ಕೆ ಕಾಲೇಜು ಪ್ರಾರಂಬಿಸಲು ನೀಡಲಾಯಿತು ಎಂದು ವಿವರಿಸಿದರು. ಇದೇ ಸಂದರ್ಭದಲ್ಲಿ ಪುಸ್ತಕದ ಲೇಖಕ ತೋಂಬತ್ತೂರು ವರ್ಷದ ಮಾಜಿ ರೇಲ್ವೆ ಸ್ಟೋರ್ ಮಟೇರಿಯಲ್ ಮ್ಯಾನೇಜರ್ ಎಸ್ ವೆಂಕಟರಾಮನ್ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಈ ಪುಸ್ತಕದ ಕುರಿತು ಮಾತನಾಡಿದ ಲೇಖಕ ವೆಂಕಟರಾಮನ್ ಮಾತನಾಡಿ ಇದೊಂದು ಸಂಶೋಧನೆ ಆಧಾರಿತವಾದ ಪುಸ್ತಕವಾಗಿದ್ದು, ಇದು ದಕ್ಷಿಣ ಮಹಾರಾಷ್ಟ್ರ ರೇಲ್ವೆ ನಿರ್ಮಾಣದಲ್ಲಿ ಬ್ರೀಟಿಷರು ಯಾವ ರೀತಿಯಾಗಿ ಹುಬ್ಬಳ್ಳಿಯಿಂದ ಮಾರ್ಮಗೋವಾ ವರೆಗೆ ರೈಲು ಟ್ರಾಕ್ ನಿರ್ಮಾಣದ ಕುರಿತು ವಿವರವಾಗಿ ಬೆಳಕು ಚೆಲ್ಲುತ್ತದೆ ಎಂದ ಅವರು ಈ ಪುಸ್ತಕ ನಿರ್ಮಾಣಕ್ಕೆ ಮುಂಬಯಿ, ತಿರುಚಿ ಮತ್ತು ಕಲ್ಕತ್ತಾ ಗ್ರಂಥಾಲಯ ಮತ್ತು ದಾಖಲೆ ಸಂಗ್ರಾಹಲಯಗಳಿಗೆ ಬೇಟ್ಟಿ ನೀಡಿ ಸಂಗ್ರಹಿಸಲಾಗಿದೆ ಎಂದು ವಿವರಿಸಿದ ಅವರು ಇನ್ನು ನಾಲ್ಕು ತಿಂಗಳಲ್ಲಿ ಪೋರ್ಚುಗಲ್ ರ್ವೆಲ್ವೆ ಕುರಿತು ಪುಸ್ತಕವನ್ನು ಬರೆದು ಮುಗಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಈ ಕೃತಿಯು ಅಪೂರ್ವವಾದ ಚಿತ್ರಗಳು ಮತ್ತು ಸಂಬಂಧಿಸಿದ ದಾಖಲೆಗಳನ್ನು ಒಳಗೂಂಡಿದೆ ಎಂದರು. ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರಾದ ಡಾ. ಪ್ರಭಾಕರ ಕಾಂಬಳೆ ಮಹಾವಿದ್ಯಾಲಯದ ಕಛೇರಿ ಅಧಿಕ್ಷಕರಾದ ಮಡಿಗಾರ್ ಮತ್ತು ಕಛೇರಿ ಸಿಬ್ಬಂದಿ ಹಾಜರಿದ್ದರು.

–ನಿತಿನ್(2 ನೇ ಸೆಮಿಸ್ಟರ್)

## ಸಂಕ್ರಾಂತಿ ದಿನ ಎಳ್ಳು, ಬೆಲ್ಲ ಬೀರುವುದು ಯಾಕೆ??

**ನಂಬಿಕೆ:** ದಕ್ಷಿಣದಿಂದ ಉತ್ತರಾಭಿಮುಖವಾಗಿ ಆರು ತಿಂಗಳು ಕಾಲ ಸೂರ್ಯನು ಪ್ರಯಾಣಿಸುವ ಪುಣ್ಯಕಾಲವೇ ಉತ್ತರಾಯಣ ಆರಂಭವಾಗುವುದು ಮಕರ ಸಂಕ್ರಾಂತಿಯಂದು. ಸಂಕ್ರಾಂತಿಯಂದು. ಸಂಕ್ರಾಂತಿ ಅಂದರೆ ಪ್ರಕಾಶಮಾನವಾದ ಬೆಳಕು. ಆ ದಿನ ಸ್ವರ್ಗದ ಬಾಗಿಲು ತೆರೆಯುವುದು. ಉತ್ತರಾಯಣದಿಂದ ದಕ್ಷಿಣಾಯಣದವರೆಗೆ ದೇವತೆಗಳಿಗೆ ಹಗಲು, ರಾಕ್ಷಸರಿಗೆ ಕತ್ತಲು ಎಂಬ ನಂಬಿಕೆ. ಆ ಸಂತೋಷಕ್ಕಾಗಿ ಎಳ್ಳು ಬೆಲ್ಲವನ್ನು ಬೀರುವರು. ಎಳ್ಳು ನೀಡುವುದರಿಂದ ನಮ್ಮ ಪಾಪಗಳು, ನಮಗೆ ತಗಲಿದ ಗ್ರಹಚಾರಗಳು ತೊಲಗುತ್ತವೆ ಎಂಬ ನಂಬಿಕೆ.

**ವೈಜ್ಞಾನಿಕ:** ಎಳ್ಳು, ಬೆಲ್ಲ ನೀಡುವುದರಿಂದ ಜನರ ಪರಸ್ಪರ ಪರಿಚಯವಗುವುದು, ಸ್ನೇಹ ವೃದ್ಧಿ ಆಗುವುದು. ಎಳ್ಳು, ಬೆಲ್ಲ ಸೇವಿಸಿದರೆ ದೇಹಕ್ಕೆ ಶಕ್ತಿ ನೀಡುವುದು. ಶರೀರಕ್ಕೆ ಕ್ಯಾಲ್ಸಿಯಂ, ಲೋಹ ತತ್ವಗಳು, ಪ್ರೋಟೀನ್ ಮತ್ತು ವಿಟಮಿನ್‌ಗಳು ಕೊಡುತ್ತದೆ. ನರ ದೌರ್ಬಲ್ಯ, ಸಂಧಿವಾತ ನಿವಾರಣೆಯಾಗುವುದು. ಸ್ತ್ರೀಯರಿಗೂ ಪ್ರಯೋಜನಕಾರಿ.

**ವೈಚಾರಿಕತೆ:** ಎಳ್ಳು, ಬೆಲ್ಲ ನೀಡುವುದರಿಂದ ಸಮಾಜದಲ್ಲಿ ಐಕ್ಯತೆ ಉಂಟಾಗುವುದು. ನೋವನ್ನು ಹಂಚಿಕೊಂಡ ಮನಸ್ಸಿನ ನೋವನ್ನು ಕಡಿಮೆ ಮಾಡಿಕೊಳ್ಳಬಹುದು.

## "ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಕೌಶಲ್ಯ ಅಭಿವೃದ್ಧಿ ತರಬೇತಿಯ ಸಮಾರೋಪ ಸಮಾರಂಭ"




**ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೋ. ಪ್ರಮೋದ ಗಾಯಿ ಮಾತನಾಡುತ್ತಿರುವದು. ಡಾ. ಹರೀಶ ರಾಮಸ್ವಾಮಿ ಡಾ. ಎಸ್. ಎಸ್. ಕಟ್ಟಿಮನಿ, ಆನಂದ ರಾವ್ ವಂದನಾ ಕೆಳಗೇರಿ ಚಿತ್ರದಲ್ಲಿ ಕಾಣಬಹುದು.**

ಉದ್ಯೋಗ ಅವಕಾಶಗಳನ್ನು ಗಟ್ಟಿಸಿಕೊಳ್ಳುವಲ್ಲಿ ಸಂವಹನದ ಕೌಶಲ್ಯ ಪ್ರಮುಖ ಪಾತ್ರ ಪ್ರಮುಖ ವಹಿಸುತ್ತದೆ ಆದ್ದರಿಂದ ನೀವು ನಿರಂತರವಾಗಿ ಅವುಗಳನ್ನು ರೂಡಿಸಿಕೊಳ್ಳಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ. ಪ್ರಮೋದ ಗಾಯಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಅವರು ಕರ್ನಾಟಕ ವಿಶ್ವವಿದ್ಯಾಲಯದ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಕೌಶಲ್ಯ ಅಭಿವೃದ್ಧಿ ತರಬೇತಿಯ ಸಮಾರೋಪ ಸಮಾರಂಭವನ್ನು ಉದ್ದೇಶಿ ಮಾತನಾಡಿದರು. ಉತ್ತರ ಕರ್ನಾಟಕದ ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲ್ಯ ಮತ್ತು ಉದ್ಯೋಗ ಅವಕಾಶಗಳನ್ನು ದೊರಕಿಸಿಕೊಡುವುದರಲ್ಲಿ ವಿದ್ಯಾರ್ಥಿಗಳ ಅನುಕೂಲತೆಗಾಗಿ ಕರ್ನಾಟಕ ವಿಶ್ವವಿದ್ಯಾಲಯದ ಮಾನವ ಸಂಪನ್ಮೂಲ ಕೇಂದ್ರದಿಂದ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದ್ದು, ಈ ಕೇಂದ್ರವು ಸದ್ಯ ಕರ್ನಾಟಕ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾತ್ರ ಆಯ್ಕೆ ಮಾಡಿದ್ದು ಮುಂದಿನ ದಿನಗಳಲ್ಲಿ ಇನ್ನಿತ್ತರ ಕಾಲೇಜುಗಳಿಗೆ ವಿಸ್ತರಿಸುವ ಯೋಜನೆ ಹೊಂದಿದೆ ಎಂದ ಅವರು ಮುಂದಿನ ವರ್ಷದಲ್ಲಿ ಉತ್ತರ ಕನಾಟಕದ ವಿವಿಧ ನಗರಗಳಾದ ಹುಬ್ಬಳ್ಳಿ, ಧಾರವಾಡ, ಬೆಳಗಾವಿ ಮತ್ತು ಕಲಬುರ್ಗಿ ಮುಂತಾದ ನಗರಗಳಲ್ಲಿ ಕಾರ್ಪೋರೆಟ್ ಕಂಪನಿಗಳು ಬರುತ್ತಿದ್ದು, ಅಂದಾಜು 15,000 ಸಾವಿರ ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲದ ಅವಶ್ಯಕತೆ ಇದ್ದು, ಅದರ ಬೇಡಿಕೆಗೆ ಅನುಸಾರವಾಗಿ ಇಂದು ಭವಿಷ್ಯತ್ತಿನ ದೃಷ್ಟಿಕೋನದಿಂದ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕಾಗಿದೆ ಎಂದರು. ಮುಂದಿನ ವರುಷ ಮತ್ತೆ ಜನವರಿಯಲ್ಲಿ ಹೊಸ ತರಗತಿಗಳನ್ನು ನಡೆಸಲಾಗುವುದು ಎಂದರು.

ಕರ್ನಾಟ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್. ಎಸ್. ಕಟ್ಟಿಮನಿ ಮಾತನಾಡಿ ಕಲಾ ಮಹಾವಿದ್ಯಾಲಯದಿಂದ ವಾಣಿಜ್ಯ ಮತ್ತು ಬಿಬಿಎ ಅಂತಿಮ ವರ್ಷದ ಪದವಿ 22 ವಿದ್ಯಾರ್ಥಿಗಳು 25 ದಿನಗಳಲ್ಲಿ ತರಬೇತಿಯನ್ನು ಪೂರ್ಣಗೊಳಿಸಿದ್ದಾರೆ ಎಂದರು.


ಕರ್ನಾಟಕ ಕಲಾ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರಾದ ಡಾ. ಉಷಾ ಮೂರ್ತಿ ಮಾತನಾಡಿ ಇಂದಿನ ವಿದ್ಯಾರ್ಥಿಗಳು ಸಂವಹನ ಮತ್ತು ದೇಹ ಭಾಷೆಯನ್ನು ಅವಶ್ಯಕವಾಗಿ ಬೆಳಸಿಕೊಳ್ಳಬೇಕು ಎಂದ ಅವರು ವಿದ್ಯಾರ್ಥಿಗಳು ಕೇವಲ ನೀವು ಮಾತ್ರ ಕಲಿತರೆ ಸಾಲದು ನೀವು ಕಲಿತದ್ದನ್ನು ನಿಮ್ಮ ನೆರೆ ಹೊರೆಯವರಿಗೆ ಕಲಿಸಿಕೊಟ್ಟಾಗ ಮಾತ್ರ ಅದು ಸಾರ್ಥಕವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ವಿಶ್ವವಿದ್ಯಾಲಯದ ಮಾನವ ಸಂಪನ್ಮೂಲ ಕೇಂದ್ರದ ನಿರ್ದೇಶಕರು ಮತ್ತು ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರದ ಸಂಯೋಜಕರಾ ಡಾ. ಹರೀಶ ರಾಮಸ್ವಾಮಿ ಮಾತನಾಡಿ ಕರ್ನಾಟಕ ವಿಶ್ವವಿದ್ಯಾಲಯ ಪದವಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡ ಕೌಶಲ್ಯ ಅಭಿವೃದ್ದಿ ತರಬೇತಿಯು ಇಂದು ಪ್ರಥಮ ಬ್ಯಾಚ್‌ನ 22 ವಿದ್ಯಾರ್ಥಿಗಳು ಯಶಸ್ವಯಾಗಿ ಪೂರ್ಣಗೊಳಿಸದ್ದಾರೆ. ಈ ತರಬೇತಿ ಕೇಂದ್ರವು ಉತ್ತರ ಕರ್ನಾಟಕ ವಿದ್ಯಾರ್ಥಿಗಳ ಪಾಲಿಗೆ ಒಂದು ವರದಾನವಾಗಿದೆ ಮುಂದಿನ ದಿನಗಳಲ್ಲಿ ಇಂತಹ ಹಲವಾರು ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಮ್ಮಿಕೊಳ್ಳಲಾಗುವುದು ಎಂದು ವಿವರಿಸಿದರು.

ತರಬೇತಿ ಪಡೆದ ವಾಣಿಜ್ಯ ವಿದ್ಯಾರ್ಥಿಗಳಾದ ಮಂಜುನಾಥ ಮತ್ತು ಮಹಾಂತೇಶ ತಮ್ಮ ಅನಿಸಿಕೆಗಳನ್ನು ಹಂಚಿಕೂಂಡರು. ಈ ಸಂದರ್ಭದಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳಿಗೆ ಕುಲಪತಿ ಪ್ರೋ. ಪ್ರಮೋದ ಗಾಯಿ ಪ್ರಮಾಣ ಪತ್ರಗಳನ್ನು ವಿತರಿಸಿದರು. ಕಾರ್ಯಕ್ರದಲ್ಲಿ ಆನಂದರಾವ್, ವಂದನಾ ಕೇಲಗೇರಿ ಪ್ರೋ. ಎ. ಆರ್. ಯಾರ್ದಿ, ಡಾ. ಕರಿದುರಗನ್ನವರ್, ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಗಳು ಹಾಜ–ರಿದ್ದರು. ಕಾರ್ಯಕ್ರಮವನ್ನು ಬಸಪ್ಪ ಅಥಣಿ ನಿರೂಪಿಸಿದರು, ಜಗದೀಶ ಬಿ ಗೌಡ ವಂದಿಸಿದರು.

_ಲಕ್ಷ್ಮೀ(6ನೇ ಸೆಮಿಸ್ಟರ್)

## ಸಣ್ಣ ಕವನ ಕಂಡಿದ್ದು



ಅಂಜದಿರು ಅರಳು ಮಲ್ಲಿಗೆ
ಮೌನದಿ ಮಂಜಿನ ಮಡಿಲಲ್ಲಿ
ತಲೆಯಿಟ್ಟು ಮಲಗಿ ಬಿಡು
ನಂಜಿನಂತಹ ನಾಲಿಗೆಯಿಂದ
ನಿನ್ನ ಪಂಜಿನಂತಹ ಹೃದಯಕ್ಕಾದ
ನೋವ ನಂದಿಸಿ ನಗುವರಳಲು

_ಕೃಪೆ(ಸಾಮಾಜಿಕ ಜಾಲ ತಾಣ)


ಗೌರವ ಸಂಪಾದಕರು: ಡಾ. ಎಸ್.ಎಸ್.ಕಟ್ಟಿಮನಿ, ಸಂಚಿಕೆ ಸಂಪಾದಕರು: ಡಾ. ಪ್ರಭಾಕರ್ ಕಾಂಬಳೆ, ಡಾ.ಈಶ್ವರ್ ಗೌಡ ಪಾಟೀಲ್, ವಿದ್ಯಾರ್ಥಿ ಸಂಪಾದಕರು: ಸುನೀಲ, ಸ್ವಾತಿ,ನಿತಿನ್. ಪುಟ ವಿನ್ಯಾಸ: ಶ್ರೀಹರಿ.